**ಮಾನ್ಯ ಪ್ರಥಮ ಧರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಬೈಲಹೊಂಗಲ**

**ಸಿ.ಸಿ.ನಂ.1934/2023**

ರಾಜ್ಯದ ಪರವಾಗಿ ಬೈಲಹೊಂಗಲ ಪೊಲೀಸ ಠಾಣೆ

ಪಿರ್ಯಾದುದಾರರು .

// ವಿರುದ್ದ //

1.ರಮೇಶ ಬಸವರಾಜ ತಳವಾರ ಹಾಗೂ ಇತರರು

ಆರೋಪಿತರು.

**ದೋಷಾರೋಪಣೆ**

ನಾನು ಬಸವರಾಜ ನಾಯಕ ಬಿ.ಎ.ಎಲ್.ಎಲ್.ಬಿ.ಎಲ್.ಎಲ್.ಎಂ ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಬೈಲಹೊಂಗಲ ಈ ಮೂಲಕ ಕೆಳಕಂಡಂತೆ ನಿಮ್ಮನ್ನು ಅಂದರೆಃ

1. ರಮೇಶ ಬಸವರಾಜ ತಳವಾರ
   ಸಾಃ ಸಂಗೊಳ್ಳಿ ತಾಃ ಬೈಲಹೊಂಗಲ
2. ಬಸವರಾಜ ರಾಮಪ್ಪಾ ತಳವಾರ
   ಸಾಃ ಸಂಗೊಳ್ಳಿ ತಾಃ ಬೈಲಹೊಂಗಲ
3. ಶ್ರೀಮತಿ ಶಾಂತವ್ವಾ ಬಸವರಾಜ ತಳವಾರ
   ಸಾಃ ಸಂಗೊಳ್ಳಿ ತಾಃ ಬೈಲಹೊಂಗಲ
4. ಸುರೇಶ ಶಂಕ್ರೇಪ್ಪಾ ಸೊಗಲದ
   ಸಾಃ ಚಚಡಿ ತಾಃ ಸವದತ್ತಿ
5. ಕಸ್ತೂರಿ ಸುರೇಶ ಸೊಗಲದ
   ಸಾಃ ಚಚಡಿ ತಾಃ ಸವದತ್ತಿ

**ಈ ಕೆಳಗಿನ ಆರೋಪಕ್ಕೆ ಗುರಿಪಡಿಸುತ್ತಿದ್ದೆನೆ.**

ಆರೋಪಿತರಾದ ನಿಮ್ಮ ಮೇಲೆ ಆರೋಪಿಸುವುದೇನೆಂದರೆ ಬೈಲಹೊಂಗಲ ಪೊಲೀಸ ಠಾಣೆಯ ವ್ಯಾಪ್ತಿಯಲ್ಲಿ ಬರುವ ಸಂಗೋಳ್ಳಿ ಗ್ರಾಮದಲ್ಲಿ ಇರುವ ಮಶೀದಿ ಓಣಿಯಲ್ಲಿ ಉತ್ತರಕ್ಕೆ ಮುಖವಾಗಿರುವ 1ನೇ ಆರೋಪಿತನು ವಾಸಿಸುವ ಮನೆಯ ಮುಂದೆ ಕಾಂಕ್ರಿಟ್ ರಸ್ತೆಯ ಮೇಲೆ ದಿಃ 27.02.2023

ರಂದು 12.40 ಗಂಟೆಯ ಸಮಯದಲ್ಲಿ 2ನೇ ಆರೋಪಿತರಿಂದ 5 ರವರು ಕೂಡಿಕೊಂಡು ಚಾಸಾ ನಂ.4 ಕುಮಾರಿ ಪ್ರಭಾವತಿ ಸುರೇಶ ಸೊಗಲದ ವಯಸ್ಸು 16 ವರ್ಷ ಇವಳು ಚಿಕ್ಕ ವಯಸ್ಸಿ ನವಳು ಇದ್ದು ಅಂತಾ ಗೊತ್ತಿದ್ದರು ಸಹ ಅವಳಿಗೆ 1ನೇ ಆರೋಪಿತನು ರಮೇಶ ಬಸವರಾಜ ತಳವಾರ ಇವನೊಂದಿಗೆ ಚಾಸಾ ನಂ.4 ಇವಳಿಗೆ ಬಾಲ್ಯ ವಿವಾಹ ಮಾಡಿ ಆರೋಪಿತರೆಲ್ಲರೂ ಕೂಡಿಕೊಂಡು ಕಲಂ 9, 10, 11 ಬಾಲ್ಯ ವಿವಾಹ ನಿಷೇಧ ಕಾಯ್ದೆ 2006 ಪ್ರಕಾರ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುತ್ತೀರಿ

ಪ್ರಶ್ನೆ 1. ಈ ಮೇಲಿನ ದೋಷಾರೋಪಣೆಯ ಸಾರಾಂಶ ನಿಮಗೆ ಅರ್ಥವಾಯಿತೇ?

ಉತ್ತರ.ಆ-1 ರಿಂದ 5

ಪ್ರಶ್ನೆ 2.ಈ ಮೇಲಿನ ಆಪಾಧನೆಯನ್ನು ನೀವು ಒಪ್ಪಿಕೊಳ್ಳುವಿರಾ? ಅಥವಾ ವಿಚಾರಣೆಯನ್ನು ನಡೆಸುವಿರಾ?

ಉತ್ತರ.ಆ-1 ರಿಂದ 5

(ಈ ಮೇಲಿನ ದೋಷಾರೋಪಣೆ ಸಾರಾಂಶವನ್ನು ಆರೋಪಿತರಿಗೆ ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಿ ಹೇಳಲಾಯಿತು. ಈ ದಾಖಲೆಯು ಆರೋಪಿತರು ನೀಡಿದ ನಿಜವಾದ ಮತ್ತು ಅವರ ಪೂರ್ಣವಾದ ಹೇಳಿಕೆಯನ್ನು ಒಳಗೊಂಡಿದೆ ಎಂದು ಈ ಮೂಲಕ ದೃಡೀಕರಿಸಲಾಗಿದೆ.)

10.02.2024 **ಪ್ರ.ದ.ನ್ಯಾ .ದಂ.ಬೈಲಹೊಂಗಲ**